**ಇಂದು ದಿನಾಂಕ:19.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ನಮ್ಮೂರಿನಿಂದ 1 ನೇ ವಾದಿಯ ಊರಿಗೆ 3 ಕಿಮೀ ಇದೆ. ನನಗೂ ಮತ್ತು 1 ನೇ ವಾದಿಗೂ ರಕ್ತ ಸಂಬಂಧ ಇರುವುದಿಲ್ಲ. 1 ನೇ ವಾದಿಯ ಜಮೀನಿನ ಪಕ್ಕ ನನಗೆ ಆಸ್ತಿ ಇರುವುದಿಲ್ಲ. 25 ವರ್ಷಗಳಿಂದ 1 ನೇ ವಾದಿಯ ಪರಿಚಯ ಇದೆ. ಹರದೂರು ಗ್ರಾಮದಲ್ಲಿ ರಾಗಿ ಮಿಲ್ ಇತ್ತು ಅಲ್ಲಿಗೆ ನಮ್ಮ ತಂದೆ ಹೋಗಿ ಬರುತ್ತಿದ್ದರು, ಆ ಮೂಲಕ ನನಗೆ 1 ನೇ ವಾದಿಯ ಪರಿಚಯವಾಗಿದೆ. ರಾಗಿ ಮಿಲ್ ಇದ್ದ ಅಂಗಡಿ ಮಳಿಗೆಯ ನಂಬರ್ ಮತ್ತು ಚೆಕ್ಕುಬಂಧಿ ಗೊತ್ತಿಲ್ಲ. 1 ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ. 1 ನೇ ವಾದಿಯ ವಂಶವೃಕ್ಷದ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ಆ ಮಾಹಿತಿ ನನಗೆ ಗೊತ್ತಿದೆ. ಹರದೂರಿನ ಸ.ನಂ.34 ರಲ್ಲಿ 4–5 ವರ್ಷ ವ್ಯವಸಾಯ ಮಾಡಿದ್ದೆ ಆದ್ದರಿಂದ ವಾದಿಯ ವಂಶವೃಕ್ಷದ ಬಗ್ಗೆ ಗೊತ್ತಿದೆ. ನಾನು ಜಮೀನು ಮಾಡುತ್ತಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ಏಕೆಂದರೆ ಬಸವೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನು ಅದು ಮುಜರಾಯಿ ಇಲಾಖೆಗೆ ಸೇರಿದೆ. ಮುಜರಾಯಿ ಇಲಾಖೆಗೆ ಸೇರಿದ ಜಮೀನನ್ನು ವ್ಯವಸಾಯ ಮಾಡಬೇಕಾದರೆ ಸಂಬಂಧಪಟ್ಟ ಇಲಾಖೆಯಿಂದ ಅನುಮತಿಪಡೆದುಕೊಳ್ಳಬೇಕು ಆದರೆ ನಾನು ವ್ಯವಸಾಯ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾತ ಮತ್ತು ಅಜ್ಜಿಯ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯ ತಾತನ ಆಸ್ತಿಗಳ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂಧಿ ಗೊತ್ತಿಲ್ಲ.

1 ನೇ ಪ್ರತಿವಾದಿಯ ತಂದೆಯ ಹೆಸರು ಕರೀಗೌಡ. ಅವರನ್ನು ಕರಿಯಪ್ಪ ಎಂತಲೂ ಕರೆಯುತ್ತಿದ್ದರು ಎಂದರೆ ಸರಿ. ಕರಿಯಪ್ಪನವರ ಹೆಂಡತಿಯ ಹೆಸರು ತಿಮ್ಮಮ್ಮ. ಕರಿಯಪ್ಪ ಮತ್ತು ತಿಮ್ಮಮ್ಮನವರಿಗೆ 3 ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ ತಿಮ್ಮೇಗೌಡ ಮಾತ್ರ ಗೊತ್ತು. ಕರಿಯಪ್ಪನವರ ಹೆಣ್ಣುಮಕ್ಕಳಿಗೆ ಮದುವೆಯಾಗಿದೆ ಅವರು ಯಾವ ಯಾವ ಊರಿನಲ್ಲಿದ್ದಾರೆ ಎಂದು ಗೊತ್ತಿಲ್ಲ. ಕರಿಯಪ್ಪನವರ ಹೆಣ್ಣುಮಕ್ಕಳು 1 ನೇ ವಾದಿಯ ಮನೆಗೆ ಬಂದು ಹೋಗುತ್ತಾರೆಯೇ ಎಂದರೆ

ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು. ಅವರ ಮೊದಲನೆಯ ಹೆಂಡತಿಯ ಹೆಸರು ಲಕ್ಷ್ಮಮ್ಮ ಎಂದರೆ ಸರಿಯಲ್ಲ ಯಲ್ಲಮ್ಮ. ಅವರ ಮೊದಲನೆಯ ಹೆಂಡತಿಯ ಹೆಸರು ಲಕ್ಷ್ಮಮ್ಮ ಎಂದು ಗೊತ್ತಿದ್ದರೂ ಸಹ ಯಲ್ಲಮ್ಮ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಮ್ಮನವರಿಗೆ 3 ಜನ ಮಕ್ಕಳು. ಅವರಲ್ಲಿ ಅಕ್ಕಯಮ್ಮ ಹಿರಿಯ ಮಗಳು. ಅವರು ನಮ್ಮ ಮನೆಗೆ ಬಂದು ಹೋಗುವುದನ್ನು ಮಾಡುವುದಿಲ್ಲ. 2 ನೇ ಮಗ ನಾಗರಾಜು ಆ ನಂತರ ನಾಗರತ್ನ. ಸದರಿ ನಾಗರತ್ನ ನಮ್ಮ ಮನೆಗೆ ಬಂದು ಹೋಗುವುದಿಲ್ಲ. ಅಕ್ಕಯಮ್ಮ ಮತ್ತು ನಾಗರತ್ನಮ್ಮರವರ ಮನೆಗೆ ನಾನು ಹೋಗಿಲ್ಲ ಹಾಗೂ ಮದುವೆಗೆ ನಾನು ಹೋಗಿಲ್ಲ. ಅಕ್ಕಯಮ್ಮ ಮತ್ತು ನಾಗರತ್ನಮ್ಮರವರ ವಯಸ್ಸಿನ ಬಗ್ಗೆ ಸ್ವಲ್ಪ ತಿಳಿದುಕೊಂಡಿದ್ದೇನೆ. ಅವರಿಬ್ಬರ ಗಂಡಂದಿರ ಹೆಸರು ಮತ್ತು ಎಲ್ಲಿ ವಾಸವಿದ್ದಾರೆ ಎಂಬುದರ 1 ನೇ ವಾದಿ ನನಗೆ ಮಾಹಿತಿ ಕೊಟ್ಟಿಲ್ಲ. ಅಕ್ಕಯಮ್ಮ ಮತ್ತು ನಾಗರತ್ನಮ್ಮರವರ ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿಕೊಂಡಿದ್ದಾರೆ ಎಂದು ತಿಳಿದುಕೊಂಡಿಲ್ಲ ಮತ್ತು ಅವರನ್ನು ನೇರವಾಗಿ ಭೇಟಿ ಮಾಡಿಲ್ಲ. ಈ ಕೇಸು ನಡೆಯುತ್ತಿರುವ ಬಗ್ಗೆ ನನಗೆ ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ಯಾರು ಕೊಟ್ಟಿಲ್ಲ. ಈ ಕೇಸಿನಲ್ಲಿ ನಾನು ಸಾಕ್ಷ್ಯ ಹೇಳುವಂತೆ ಯಾರು ನನ್ನನ್ನು ಕೇಳಿಕೊಂಡಿಲ್ಲ.

ಸ.ನಂ.37/2 ರಲ್ಲಿ 4 ಎಕರೆ 35/2 ರಲ್ಲಿ 9 ಎಕರೆ 14 ಗುಂಟೆ ಜಮೀನಿಗೆ ಈ ಕೇಸು ನಡೆಯುತ್ತಿದೆ. ದಾವಾ ಆಸ್ತಿಗಳನ್ನು ಖುದ್ದಾಗಿ ನೋಡಿದ್ದೇನೆ. ದಾವಾ ಆಸ್ತಿಗಳನ್ನು ಗೋವಿಂದೇಗೌಡ ಮತ್ತು ನಾಗರಾಜು ಒಟ್ಟಾಗಿ ಮಾಡುತ್ತಿದ್ದಾರೆ. 1 ನೇ ವಾದಿಯ ಮನೆಯ ಒಳಗೆ 3-4 ಬಾರಿ ಹೋಗಿದ್ದೇನೆ. 1 ನೇ ವಾದಿ ಮತ್ತು ಅವರ ತಂದೆ ಒಟ್ಟಾಗಿ ವಾಸವಿದ್ದಾರೆ ಅಡುಗೆಯನ್ನು ಒಟ್ಟಾಗಿ ಮಾಡುತ್ತಾರೆ. 1 ನೇ ವಾದಿ ದಕ್ಷಿಣಕ್ಕೆ ಕರಿನಾಯಕರವರ ಮನೆ, ಉತ್ತರಕ್ಕೆ ಮೈಲಾರಿರವರ ಮನೆ, ಪಶ್ಚಿಮಕ್ಕೆ ಮೈಲಾರಿರವರ ಖಾಲಿ ನಿವೇಶನ ಮತ್ತು ಮನೆ, ಪೂರ್ವಕ್ಕೆ ಸರ್ಕಾರಿ ರಸ್ತೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಿಷಯಗಳಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ಮತ್ತು 1 ನೇ ವಾದಿ ಸ್ನೇಹಿತರು ಎಂದರೆ ಸರಿ. ನಾನು 1 ನೇ ವಾದಿಯ ಮಾಹಿತಿಯ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ವಾದಿ 2 ಮತ್ತು 3 ರವರಿಗೂ ಮತ್ತು 1 ನೇ ಪ್ರತಿವಾದಿಗೂ ಯಾವುದೇ ರಕ್ತ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಜಮೀನುಗಳನ್ನು ಈ ಹಿಂದೆಯೇ ವಿಭಾಗ ಮಾಡಿಕೊಂಡು ಅವರವರ ಭಾಗದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ.

**<u>ಪಾಟೀ ಸವಾಲು : 3 ರಿಂದ 6 ಪ್ರತಿವಾದಿಗಳ ಪರ ಶ್ರೀ.ಎಂ.ಸಿ.ಹೆಚ್. ವಕೀಲರಿಂದಃ</u>**

ವಿಭಾಗ ಪತ್ರದ ಪ್ರಕಾರ ಗೋವಿಂದೇಗೌಡ ಮತ್ತು ಅವರ ತಾಯಿ ಶಿವಮ್ಮರವರ ಭಾಗಕ್ಕೆ ಸ.ನಂ.35/2 ರಲ್ಲಿ ದಕ್ಷಿಣಾರ್ಧ ಭಾಗ 4 ಎಕರೆ 27 ಗುಂಟೆ ಜಮೀನನ್ನು ಪ್ರತಿವಾದಿ 3 ರಿಂದ 6 ರವರು ಸ್ವಾಧೀನ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ವಾದಿಯ ಭಾಗಕ್ಕೂ 4 ಎಕರೆ ಬಂದಿದೆ ಎಂದರೆ ಸುಳ್ಳು. ಅವರು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**